ಸಿಸಿನಂ.126/2023
ಡಿಡಬ್ಲ್ಯೂ: 1

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 126/2023
ಡಿಡಬ್ಲೂ : 1

| | | |
|---|---|---|
| ಹೆಸರು | : | ಶ್ರೀ ಮಂಜುನಾಥ |
| ತಂದೆಯ ಹೆಸರು | : | ಜಟ್ಟಿಪಟಗಾರ |
| ವರ್ಷ | : | 61 ವರ್ಷ |
| ಉದ್ಯೋಗ | : | ಏನು ಇಲ್ಲ |
| ವಾಸ್ತವ್ಯ | : | ಹೆಗಡೆ , ಕುಮಟಾ |
| ಸತ್ಯ ಪ್ರತಿಜ್ಞೆಯ ಮೇರೆಗೆ | : | ದಿನಾಂಕ 06-11-2025 ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. |

**ಮುಖ್ಯ ವಿಚಾರಣೆ : ಆರೋಪಿ ಪರವಾಗಿ : ಶ್ರೀ ಎನ್ ಎಮ್ ಎನ್ ವಕೀಲರಿಂದ :**

ನಾನು ಈ ಪೂರ್ವದಲ್ಲಿ ಸೇವಾ ಸಹಕಾರಿ ಸಂಘ ನಿಯಮಿತ ಕುಮಟಾದಲ್ಲಿ ಮ್ಯಾನೇಜರ್ ಆಗಿದ್ದೆ . ನಾನು ಮೇ 1, 1991 ರಲ್ಲಿ ಕ್ಲರ್ಕ ಆಗಿ ಫಿರ್ಯಾದು ಸಂಸ್ಥೆಗೆ ಸೇರಿದೆ . 2013 ರಿಂದ ನಾನು ಸದರಿ ಬ್ಯಾಂಕಿನಲ್ಲಿ ಮುಖ್ಯ ಕಾರ್ಯ ನಿರ್ವಾಹಕನಾಗಿದ್ದೆ .

2. ಜನೇವರಿ 2020 ರಲ್ಲಿ ನನ್ನ ಮೇಲೆ 1 ಕೋಟಿ ರೂಪಾಯಿ ಅವ್ಯವಹಾರ ಆಗಿದೆ ಎಂದು ಆರೋಪಿಪ ಮಾಡಿದರು . ಕಾರಣ ನಾನು ಫಿರ್ಯಾದು ಸಂಸ್ಥೆಯಿಂದ ಹೊರಗೆ ಬಂದೆ . ಪ್ರತಿವರ್ಷ ಫಿರ್ಯಾದು ಬ್ಯಾಂಕಿನಲ್ಲಿ ಅಡಿಟ್ ಮಾಡುತ್ತಾರೆ ಅದರಲ್ಲಿ ನಾನು ಅವ್ಯವಹಾರ ಮಾಡಿರುವ ಬಗ್ಗೆ ಎಲ್ಲಿ ಕಂಡು ಬಂದಿಲ್ಲ. ಆಡಿಟ್ ನ್ನು ಶ್ರೀ ಪಿ ವಿ ಭಟ್ ಹಾಗೂ ಶ್ರೀಮತಿ ರೇಷ್ಮಾ ದಿಕ್ಷಿತ್ ರವರು ಆಡಿಟ್ ಮಾಡಿರುತ್ತಾರೆ . ಆಡಿಟ್ ವರದಿಯಲ್ಲಿ ಯಾವುದೇ ಅವ್ಯವಹಾರ ಅಪವಾದ ಇಲ್ಲ . ದಿಃ 24-02-2020 ರಲ್ಲಿ ನನ್ನನ್ನು ಫಿರ್ಯಾದು ಬ್ಯಾಂಕಿನಿಂದ ಅಮಾನತ್ತು ಮಾಡಿದರು . ಆ ನಂತರ ನಾನು ಫಿರ್ಯಾದು

ಬ್ಯಾಂಕಿಗೆ ಹೋಗಿಲ್ಲ . ತದನಂತರ ದಿಃ 27-05-2020 ರಲ್ಲಿ ನಾನು ಬ್ಯಾಂಕಿಗೆ ಹೋದಾಗ ತಿಮ್ಮಪ್ಪ ಹನುಮು ಪಟಗಾರ ಮತ್ತು ಮತ್ತು ಪ್ರಕರಣ ಒಟ್ಟೂ 4 ಪ್ರಕರಣಕ್ಕೆ ಆ 4 ಜನ ಸಾಲ ಮಾಡಿದ್ದಕ್ಕೆ ಬಲವಂತವಾಗಿ ಜಾಮೀನುದಾರನಾಗಿ ನನ್ನ ಸಹಿಯನ್ನು ಪಡೆದಿದ್ದಾರೆ . ದಿಃ 27-05-2020 ಕ್ಕೆ ಅದೇ ದಿನ ಅವರಿಗೆ ಸಾಲ ನೀಡಿ ಆ ಸಾಲವನ್ನು ಬಲವಂತವಾಗಿ ನನ್ನ ಕೆಡಿಸಿಸಿ ಬ್ಯಾಂಕ ಖಾತೆ, ಕುಮಟಾ ಶಾಖೆಗೆ ಹಾಕಿ ಅದೇ ದಿನ ನನ್ನ ಖಾತೆಯಿಂದ ಒತ್ತಾಯಪೂರ್ವಕವಾಗಿ ಸಂಘಕ್ಕೆ ಜಮಾ ಮಾಡಿಕೊಂಡಿದ್ದಾರೆ . ಈ ರೀತಿ ಖಾತೆಗೆ ಅಡ್ಜೆಸ್ಟ ಮಾಡಿರುವುದು ಸ್ಪಷ್ಟವಾಗಿ ಕಾಣುತ್ತದೆ . ಅವರ ಮೇಲೆ ಬರುವ ಆರೋಪವನ್ನು ನನ್ನ ಮೇಲೆ ತಿರುಗಿಸಲು ಈ ರೀತಿ ಮಾಡಿರುತ್ತಾರೆ . ಕೆಡಿಸಿಸಿ ಬ್ಯಾಂಕಿನ ಚೆಕ್ ಗೆ ಸಹಿ ಪಡೆದುಕೊಂಡು ಫಿರ್ಯಾದು ಸೊಸೈಟಿ ಖಾತೆಗೆ ವರ್ಗಾಯಿಸಿಕೊಂಡಿರುತ್ತಾರೆ . ಅಲ್ಲದೇ ಅದೇ ದಿನ ಎಕ್ಸೆಸ್ ಬ್ಯಾಂಕಿನ 4 ಖಾಲಿ ಚೆಕ್ ಗಳಿಗೆ ಬಲವಂತವಾಗಿ ಸಹಿ ಪಡೆದುಕೊಂಡು ನಿಮಗೆ ಯಾವುದೇ ತೊಂದರೆ ಮಾಡುವುದಿಲ್ಲ ಎಂದು ಭರವಸೆ ನೀಡಿ ನನ್ನಿಂದ ಬಲವಂತವಾಗಿ ಖಾಲಿ ಚೆಕ್ ನ್ನು ಪಡೆದುಕೊಂಡಿದ್ದಾರೆ . ಚೆಕ್ ನ ಮೇಲೆ ನಾನು ಯಾವುದೇ ಬರವಣಿಗೆ ಮಾಡಿಲ್ಲ . ಬಲವಂತವಾಗಿ ನನ್ನ ಸಹಿಯನ್ನು ಮಾತ್ರ ಪಡೆದುಕೊಂಡಿರುತ್ತಾರೆ . ಒಂದು ವ್ಯಕ್ತಿ ಅದೇ ಸಂಸ್ಥೆಯಲ್ಲಿ ಕೆಲಸ ಮಾಡಿ ಅಮಾನತ್ತುಗೊಂಡ ನಂತರ ಆ ವ್ಯಕ್ತಿಯ ಜಾಮೀನನ್ನು ಪಡೆಯಲು ಬರುವುದಿಲ್ಲ . 4 ಜನರ ಸಾಲದ ಖಾತೆಗೆ ನನ್ನನ್ನು ಜಾಮೀನುದಾರನನ್ನಾಗಿ ಸೇರ್ಪಡಿಸಿದ್ದಾರೆ . ಇದನ್ನು ನೋಡಿದರೆ ಉದ್ದೇಶಪೂರ್ವಕವಾಗಿ ನನ್ನನ್ನು ಷಡ್ಯಂತರದಿಂದ ಒಳಪಡಿಸಿದ್ದಾರೆ.

3. ದಿಃ 29-06-2022 ನೇ ಇಸ್ವಿಯಲ್ಲಿ ಠರಾವಿನ ಮುಖ ಪುಟದಲ್ಲಿ ಠರಾವು ಮಾಡುವಾಗ ದಿಃ 26-04-2022 ಕ್ಕೆ ನಾನು ಚೆಕ್ ನ್ನು ಕೊಟ್ಟಿದ್ದೇನೆ ಎಂದು ಹೇಳಿದ್ದಾರೆ . ಸಾಕ್ಷಿ ದಿನಾಂಕವನ್ನು ತಮ್ಮ ಕೈಯಲ್ಲಿ ಬರೆದುಕೊಂಡು ದಿನಾಂಕಗಳನ್ನು ಹೇಳುವುದು ಕಂಡು ಬರುತ್ತದೆ . ಠರಾವಿನ ಮುಖ ಪುಟದಲ್ಲಿ ಅವರು ಇಲ್ಲಿಯವರೆಗೆ ಸಂಘಕ್ಕೆ ಬಂದಿರುವುದಿಲ್ಲ ಎಂದು ಬರೆದುಕೊಂಡಿದ್ದಾರೆ . ನಾನು ಫಿರ್ಯಾದು

ಸಂಘಕ್ಕೆ ಹೋಗಿರುವುದಿಲ್ಲ ಹಾಗೂ ಚೆಕ್ ನ್ನು ಕೊಟ್ಟಿದ್ದು ಇರುವುದಿಲ್ಲ . ದಿಃ 27-05-2020 ರಲ್ಲೇ ಖಾಲಿ ಚೆಕ್ ನ್ನು ತೆಗೆದುಕೊಂಡು ಬಲವಂತವಾಗಿ ನನ್ನ ಸಹಿ ಹಾಕಿಸಿ ಇಟ್ಟುಕೊಂಡಿದ್ದರು . ಎಲ್ಲಿಯೂ ಆರೋಪಿ ಬರದೇ ನನ್ನ ಖಾತೆಯಿಂದ ಹಣ ತುಂಬಿಸಿಕೊಂಡಿದ್ದಾರೆ . ಕಾರಣ ನಾನು ಇದರಲ್ಲಿ ಭಾಗಿದಾರನಾಗಿರುವುದಿಲ್ಲ . ದಿಃ 27-05-2020 ರಲ್ಲಿ ಒಂದೇ ದಿವಸದಲ್ಲಿ ಚೆಕ್ ನ್ನು ಅಜ್ಜೆಸ್ಟಮೆಂಟ್ ಮಾಡಿದ್ದಾರೆ . ಸಾಲಗಾರನ ಖಾತೆಯಿಂದ ನನ್ನ ಖಾತೆಗೆ ಹಾಕಿ ಅಲ್ಲಿಂದ ಸಂಘದ ಖಾತೆಗೆ ಹಣವನ್ನು ತುಂಬಿಸಿಕೊಂಡಿರುತ್ತಾರೆ . ಕಾರಣ ಸಾಲದ ಖಾತೆಯಲ್ಲಿ ಸಾಲದ ಹಣ ಇರುವುದಿಲ್ಲ . ನನ್ನಿಂದ ಕಾನುನಾಬದ್ಧವಾಗಿ ಜಾಮೀನು ಪಡೆಯಲು ಆಗುವುದಿಲ್ಲ . ದಿಃ 06-05-2022 ರಂದು ನಾನು ಫಿರ್ಯಾದು ಸಂಘಕ್ಕೆ ಹೋಗಿಲ್ಲ . ಚೆಕ್ ನ್ನು ಕೊಟ್ಟಿಲ್ಲ . ದಿಃ 06-05-2022 ಕ್ಕೆ ಫಿರ್ಯಾದು ಬ್ಯಾಂಕಿಗೆ ನಾನು ಯಾವುದೇ ಹಣ ತುಂಬತಕ್ಕದ್ದು ಇರುವುದಿಲ್ಲ . ಚೆಕ್ ನಲ್ಲಿ ನಮೂದಿಸಿದ ಹಣ ನನ್ನಿಂದ ಕಾಯ್ದೆಬದ್ಧವಾಗಿ ವಸೂಲು ಮಾಡತಕ್ಕ ಹಣ ಆಗಿರುವುದಿಲ್ಲ . ತಿಮ್ಮಪ್ಪ ಪಟಗಾರ ಇವರಿಗೆ ನೀಡಿದ ಸಾಲ ಅದು ಕಾಯ್ದೆಬದ್ಧವಾಗಿರುವುದಿಲ್ಲ . ಈ ಪ್ರಶ್ನೆಯನ್ನು ಈ ಹಂತದಲ್ಲಿ ಕೇಳಲು ಬರುವುದಿಲ್ಲ ಎಂದು ಫಿರ್ಯಾದು ಪರ ವಕೀಲರು ಆಕ್ಷೇಪಿಸಿರುತ್ತಾರೆ . ನಾನು ಕೊನೆಯದಾಗಿ ಫಿರ್ಯಾದು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದಾಗ ಗೋವಿಂದ ಬೊಬ್ಬು ಪಟಗಾರ ಅಧ್ಯಕ್ಷರಾಗಿದ್ದರು. ನನ್ನ ಖಾತೆಯಿಂದ ಫಿರ್ಯಾದು ಸಂಘಕ್ಕೆ ಹಣ ಜಮಾ ಆದ ಬಗ್ಗೆ ನನ್ನ ಬಳಿ ದಾಖಲಾತಿ ಇದೆ . ಅದನ್ನು ಹಾಜರು ಪಡಿಸುತ್ತೇನೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.